ಅಂತ ನಿಂಗೆ ಇವತ್ತಾದ್ರೂ ಅನ್ನಿಸ್ತಿಲ್ಲ..

ಇದೀಗ ಅಸಮಾಧಾನದ, ನಿಂದನೆಯ ಕೆಲ ಮಾತುಗಳನ್ನು ಅನಿವಾರ್ಯವಾಗಿ ಜೀರ್ಣಿಸಿಕೊಳ್ಳಬೇಕಾಗುತ್ತದೆ ಎಂದುಕೊಳ್ಳುತ್ತಾ ಎದುರಿಸಲು ಸಿದ್ಧನಾಗಿ ತಲೆ ಬಗ್ಗಿಸಿ ಕೂತುಕೊಂಡ ಪದ್ಮನಾಭ. ನಾಕು ಮಾತು ಬೈದ್ರೆ ತೆಪ್ಪಗೆ ಕೂತ್ಕಂಡು ಕೇಳಿಸ್ಕಾ. ಅಡ್ಡ ಬಾಯಿ ಹಾಕ್ಬೇಡ. ನಮ್ಮ ಕೆಲಸ ಆಗ್ಬೇಕೂಂತಾದ್ರೆ ಅಂದಿದ್ದೆಲ್ಲಾ ಅನ್ನಿಸ್ಕೋಬೇಕಲ್ಲ? ಕಿವಿ ತಿರುಪಿ ಕಳಿಸಿಕೊಟ್ಟಿದ್ದಳು ಅಮ್ಮ. ಅಮ್ಮ ಹೇಳಿದಂತೆ, ಇವನ ನಿರೀಕ್ಷೆಯಂತೆ, ಯಾವ ಒರಟು ಮಾತುಗಳೂ ರಾಮಚಂದ್ರನ ಬಾಯಿಂದ ಉದುರಿ ಬೀಳಲಿಲ್ಲ.

ಏಳು, ಮೊದಲು ಕೈಕಾಲು ತೊಳ್ಕಂಬಾ. ಬೆಳಗಾ ಮುಂಚೆ ಹೊರಟರ್ತಿ. ಹೊಟ್ಟೆ ಹುಳ ಎಲ್ಲಾ ಸತ್ತು ಹೋಗಿರ್ಬೇಕು

ಇಲ್ಲ, ಇಲ್ಲ, ಹಂಗೇನಿಲ್ಲ. ಬೆಳಿಗ್ಗೆ ತಿಂಡಿ ತಿಂದ್ಕಂಡೇ ಹೊರಟದ್ದು ನಾನು..

ನಡಿ, ನಡಿ. ನಿನ್ನ ಮಕ ನೋಡಿದ್ರೆ ಗೊತ್ತಾಗುತ್ತೆ ನಂಗೆ.

ಯಾವತ್ತೂ ನೋಡಿರದಿದ್ದ ಅಪ್ಪ ಅಮ್ಮನಾಗುತ್ತಿರುವ ಅನುಭವ. ಪದ್ಮನಾಭ ಕೂತಲ್ಲಿಂದ ಎದ್ದು ರಾಮಚಂದ್ರನನ್ನು ಹಿಂಬಾಲಿಸಿದ.

ಚೌಕಾಕಾರದ ಅರೆಗತ್ತಲ ನಡುಮನೆ ದಾಟಿ, ಉದ್ದಾನುದ್ದದ ಊಟದ ಒಳಗನ್ನು ದಾಟಿ, ಹಿತ್ತಲಿನ ಬಾಗಿಲು ದಾಟಿ, ಎಡಬದಿಯಲ್ಲಿದ್ದ ಬಚ್ಚಲನ್ನು ನಿರ್ದೇಶಿಸಿ, ಪಾಣಿಪಂಚೆ ಅಲ್ಲೇ ತಂತಿ ಮೇಲಿದೆ. ತಗಾ.. ಎಂದು ಹೇಳಿ, ತಾನು ಅರೆ ಮುಗಿಸಿದ ಕೆಲಸವನ್ನು ಪೂರ್ಣಗೊಳಿಸಲು ಅಡಿಗೆ ಮನೆಗೆ ನಡೆದ ರಾಮಚಂದ್ರ. ಬಚ್ಚಲ ಬಾಗಿಲಿಕ್ಕಿಕೊಂಡು ಯಥಾಸಾವಕಾಶವಾಗಿ ಕೈಕಾಲು ತೊಳೆಯುವಾಗ ತೊಳೆದಷ್ಟೂ ಕಣ್ಣುಗಳು ತುಂಬಿ ತುಂಬಿ ಬರುತ್ತಿವೆ. ತನ್ನದಾಗಿರಬೇಕಾಗಿದ್ದ ತನ್ನ ಹಕ್ಕಿನ ಮನೆಯಲ್ಲಿ ತಾನೊಬ್ಬ ಪರಕೀಯ. ಅತಿಥಿ. ತಮ್ಮ ಸ್ವಾರ್ಥ ಇಲ್ಲದಿದ್ದರೆ ಈ ದಿಕ್ಕಿಗೆ ತಲೆ ಹಾಕಿ ಮಲಗುತ್ತಲೂ ಇರುತ್ತಿರಲಿಲ್ಲವೇನೋ. ಅಂತಾದ್ದೇನಾಗಿತ್ತು ಅಪ್ಪ, ಅಮ್ಮನ ನಡುವೆ? ಒಬ್ಬರ ಮಕ ಒಬ್ಬರು ನೋಡದಂತೆ ದ್ವೇಷ ಬೆಳೆದದ್ದು ಹೇಗೆ? ಅಪ್ಪನನ್ನು ನೋಡಿದರೆ ಒಳ್ಳೆಯವನ ಥರ ಕಾಣುತ್ತಿದ್ದಾನೆ. ಇವನ ಹೆಸರೆತ್ತಿದರೆ ಅಮ್ಮ ಮಾತು ಬದಲಾಯಿಸುತ್ತಿದ್ದಳು. ಅದೆಲ್ಲಾ ಕಟ್ಕೊಂಡು ಈಗೇನಾಗ್ಬೇಕಾಗಿದೆ? ನಿನ್ನ ಓದು, ಬರ ನೋಡ್ಕಂಡು ನಿನ್ನಷ್ಟಕ್ಕೆ ತೆಪ್ಪಗಿರು. ನೀನು ಅದನ್ನೆಲ್ಲಾ ಕೇಳ್ಲೂ ಬ್ಯಾಡ, ನಾನು ಹೇಳೋದೂ ಇಲ್ಲ ಬೆಳೆದು ನಿಂತ ಮಕ್ಕಳೆದೆರೂ ಹಂಚಿಕೊಳ್ಳಲಾಗದ ಗುಟ್ಟು ಅದೇನಿದೆಯೋ ಪರಮಾತ್ಮ ಬಲ್ಲ.

ಗೋಡೆ ಬದಿಗೆ ಎಳೆದು ಕಟ್ಟಿದ್ದ ತಂತಿಯ ಮೇಲೆ ನೇತಾಡುತ್ತಿದ್ದ ಪಾಣಿಪಂಚೆಯಿಂದ ಮುಖ ವರೆಸಿಕೊಳ್ಳುವಾಗ ನಾಸಿಕಾಗ್ರವನ್ನು ಸೋಕಿಯೂ ಸೋಕದಂತಿದ್ದ ಅದರ ಕನಗು ವಾಸನೆಯನ್ನು ಪುಪ್ಪುಸದ ತುಂಬಾ ಹೀರಿಕೊಳ್ಳುವವನಂತೆ ದೀರ್ಘಶ್ವಾಸ ಎಳೆದುಕೊಂಡ ಪದ್ಮನಾಭ. ಅಪ್ಪ ಉಪಯೋಗಿಸುತ್ತಿರಬಹುದಾದ ಪಾಣಿಪಂಚೆ. ಮೈಯೆಲ್ಲಾ ಜುಮುಜುಮು.

****

ಪುಟ್ಟ ಸ್ಟೀಲ್ ತಟ್ಟೆಯಲ್ಲಿ ನಾಲ್ಕು ಬಾಳೆಹಣ್ಣುಗಳು. ಪಕ್ಕದಲ್ಲಿ ಧಾರಾಳವಾಗಿ ಸಕ್ಕರೆ, ತುಪ್ಪ ಹಾಕಿದ ಬಟ್ಟಲು. ಲಘು ಫಲಾಹಾರ.

ಬಾ ಇಲ್ಲಿ, ಅಡಿಗೆ ಮನೇಲೇ ಕೂತ್ಕಾ. ನನ್ನ ಕೆಲಸ ಅರ್ಧಂಬರ್ಧ ಆಗಿದೆ.. ಸೀದಾ ಅಡಿಗೆ ಮನೆಗೆ ಆಹ್ವಾನಿಸಿದ್ದ ರಾಮಚಂದ್ರ. ಗೋಡೆ ವತ್ತಿಗೆ ಒಂದು ಮಣೆ ಹಾಕಿಕೊಟ್ಟಿದ್ದ. ಫಲಾಹಾರದ ತಟ್ಟೆ ತಂದಿಟ್ಟಿದ್ದ. ಯಾವತ್ತೂ ನೋಡದಿದ್ದವನ ಕೈಲಿ ಉಪಚಾರ ಮಾಡಿಸಿಕೊಳ್ಳುತ್ತಿರುವುದಕ್ಕೆ ಹುಡುಗನಿಗೆ ಸಂಕೋಚ.

ಇದೆಲ್ಲಾ ಬೇಡ ನಂಗೆ..

ತಿನ್ನು, ತಿನ್ನು, ಏನಾಗಲ್ಲ. ನನ್ನ ನಳಪಾಕ ತಯಾರಾಗೋಕೆ ಇನ್ನೊಂದು ಗಂಟೇನಾದ್ರೂ ಬೇಕು. ಅಷ್ಟರಲ್ಲಿ ತಿಂದಿದ್ದು ಕರಗಿರುತ್ತೆ.. ಊಟ ಮಾಡಿಕೊಂಡು ಹೋಗು ಎನ್ನುವ ಪರೋಕ್ಷ ಇಂಗಿತ. ಹೆಚ್ಚು ಹೇಳಿಸಿಕೊಳ್ಳದೆ ಪದ್ಮನಾಭ ಬಾಳೆಹಣ್ಣು ಕೈಗೆತ್ತಿಕೊಂಡು ಸಿಪ್ಪೆ ಬಿಡಿಸಿದ.

ಹಣ್ಣು ತಿಂದು ಮುಗಿಸಿ, ತುಪ್ಪ, ಸಕ್ಕರೆ ಮೆತ್ತಿದ್ದ ಬೆರಳುಗಳನ್ನು ಚೀಪಿಕೊಳ್ಳುತ್ತಿದ್ದಂತೆ ಹಾಲು ತುಂಬಿದ ಲೋಟ ಎದುರಿಗೆ ಬಂದು ಕೂತಿತು.

ಬ್ಯಾಡ, ಬ್ಯಾಡ. ಹಾಲು ಕುಡಿಯೋದೇ ಇಲ್ಲ ನಾನು..

ಇವತ್ತೊಂದಿನ ಕುಡಿದ್ರೆ ಏನಾಗಲ್ಲ. ಕುಡಿ. ನಿನ್ನ ವಯಸ್ಸಿನೋರು ಚೆನ್ನಾಗಿ ಉಂಡು, ತಿಂದು ಮಾಡ್ಬೇಕು..

ತಿಂದ ತಟ್ಟೆ, ಕುಡಿದ ಲೋಟವನ್ನು ತೊಳೆಯುವ ಜಾಗದಲ್ಲಿಡಲು ಕೈಗೆತ್ತಿಕೊಂಡರೆ ಬಿಡಲಿಲ್ಲ ರಾಮಚಂದ್ರ.

ನಾ ತೆಗೀತೀನಿ, ಇಡು ಅಲ್ಲೇ..

ಪದ್ಮನಾಭ ಬಚ್ಚಲಿಗೆ ಹೋಗಿ ಬಿಸಿ ನೀರಲ್ಲಿ ಕೈ ತೊಳೆದುಕೊಂಡು ಬಂದ. ಪಾಣಿಪಂಚೆಯಲ್ಲಿ ಕೈ ವರೆಸಿಕೊಳ್ಳುವಾಗ ಅನಗತ್ಯವಾಗಿದ್ದರೂ ಅದನ್ನು ಮೂಗಿನ ಬಳಿಗೊಯ್ದು ಆಘ್ರಾಣಿಸಿದ. ಮರಳಿ ಒಳಬಂದವನಿಗೆ ಅಪರೂಪದ ಅತಿಥಿಯಂತೆ ಸೀದಾ ಮುಂಚೇಕಡೆಗೆ ಹೋಗಿ ಕುರ್ಚಿಯಲ್ಲಿ ಕೂರಬೇಕೋ ಅಥವಾ ಅಡಿಗೆ ಮನೆಗೆ ಹೋಗಬೇಕೋ ತಿಳಿಯದ ದ್ವಂದ್ವ.

ಬಾ ಇಲ್ಲೇ.. ಕಾಯಿ ತುರಿಯುತ್ತಿದ್ದ ರಾಮಚಂದ್ರ ಒಳಗಿನಿಂದಲೇ ಆಹ್ವಾನಿಸಿದ. ಅಡಿಗೆ ಮನೆಯಲ್ಲಿ ಗೃಹಿಣಿಯಂತೆ ತನ್ನಪ್ಪ ಕೆಲಸ ಮಾಡುತ್ತಿರುವುದಕ್ಕೆ ಸಾಕ್ಷಿಯಾಗಿ ಪದ್ಮನಾಭ ಮಣೆಯ ಮೇಲೆ ಮುದುರಿಕೊಂಡು ಎಂಬಂತೆ ಕೂತ. ನಾನೇನಾದ್ರೂ ಮಾಡಿಕೊಡ್ಲಾ? ಎಂದು ವಿಚಾರಿಸಬೇಕೆಂಬ ತುಡಿತ. ಆದರೆ ಗಂಟಲಲ್ಲಿನ ಮಾತು ಬಾಯಿಗೆ ಬರದ ಸಂಕೋಚ. ಅಪ್ಪ ಎಷ್ಟೇ ಸದರದಿಂದ ಮಾತಾಡಿಸುತ್ತಿದ್ದರೂ ಇವನೊಳಗಿನ ಅಪರಿಚಿತತೆಯ ತೆರೆ ಇನ್ನೂ ಸರಿದಿಲ್ಲ. ಮುಕ್ತವಾಗಿ ಬೆರೆಯಲು ಸಾಧ್ಯವಾಗುತ್ತಿಲ್ಲ. ತರಕಾರಿ ಹೆಚ್ಚುತ್ತಾ, ಕುಕ್ಕರ್ ಜೋಡಿಸುತ್ತಾ, ತಾನೇ ಪೀಠಿಕೆ ಹಾಕಿದ ರಾಮಚಂದ್ರ.

ಮತ್ತೇನಪ್ಪಾ ವಿಶೇಷ? ಅಕ್ಕ ಹೆಂಗಿದಾಳೆ? ಇಪ್ಪತ್ತೊಂದು ವರ್ಷ ಆಯ್ತೂಂತ ಕಾಣುತ್ತೆ, ಅಲ್ವಾ?

ಈ ಸುಸಂದರ್ಭವನ್ನು ಬಳಸಿಕೊಳ್ಳಬೇಕೆಂದು ಕ್ಷಣ ಮಾತ್ರದಲ್ಲಿ ಲೆಕ್ಕ ಹಾಕಿದ ಪದ್ಮನಾಭ.

ಅದಕ್ಕೇ ಬಂದಿದ್ದು ನಾನು. ಅಕ್ಕಂಗೆ ಮದುವೆ ಗೊತ್ತಾಗಿದೆ..

ಹೌದನೋ? ಒಳ್ಳೇ ಸುದ್ದಿ ತಗಂಬಂದಿದ್ದಿ.. ಹಾಗೆಂದವನ ದನಿಯಲ್ಲಿ ಸಣ್ಣ ಕಂಪನವಿತ್ತೇ? ಅಪ್ಪ ಅನಿಸಿಕೊಂಡ ತಾನು ಇದ್ದೂ ಇಲ್ಲದ ಲೆಕ್ಕವಾಗಿ ಮಗಳಿಗೆ ಗಂಡು ಗೊತ್ತು ಮಾಡಿಬಿಟ್ಟಳೇ ಹೆಂಡತಿ ಎನ್ನುವ ಸಣ್ಣ ಕಿನಿಸು?

ಒಳ್ಳೇದಾಯ್ತು ಬಿಡು. ಏನ್ಮಾಡ್ತಿದಾನೆ ಹುಡುಗ?

ಕಾಲೇಜಲ್ಲಿ ಲೆಕ್ಚರರ್ರು..

ಪರವಾಗಿಲ್ಲ ನಿಮ್ಮಮ್ಮ, ಒಳ್ಳೇ ಸಂಬಂಧ ಹುಡುಕಿದಾಳೆ, ಗಟ್ಟಿಗಿತ್ತಿ..

ಈ ಮಾತಿನ ಹಿಂದೆ ಅಡಗಿರಬಹುದಾದ ನಂಜು ಹುಡುಗನಿಗೆ ಸ್ಪಷ್ಟವಾಗಿ ಅರಿವಿಗೆ ಬಂದು ಆತಂಕ ಶುರುವಾಯ್ತು. ಬಂದ ಕೆಲಸ ಹಣ್ಣೋ, ಕಾಯೋ? ತನ್ನನ್ನು ಕಂಡಾಗಿನಿಂದ ಅಪ್ಪ ನಡೆದುಕೊಂಡ ರೀತಿಗೂ, ಈಗ ಮಾತಾಡುತ್ತಿರುವ ಪರಿಗೂ ವ್ಯತ್ಯಾಸ ಗೊತ್ತಾಗದಷ್ಟು ತಾನು ದಡ್ಡ ಶಿಖಾಮಣಿಯಲ್ಲ.

ಮದುವೆ ಗೊತ್ತಾಗಿದೆ ಅಂದ್ರೆ ಪಕ್ಕಾ ಆಗಿದೆ ಅಂತ ಅರ್ಥ ಅಲ್ಲ. ಹುಡುಗ, ಹುಡುಗಿ ಒಪ್ಕಂಡಾಗಿದೆ. ನಮ್ಮನೆ ಕತೆ ಅವರಿಗೆ ಹೇಳಾಗಿದೆ..

ಸೈ ಮತ್ತೆ, ವಾಲಗ ಊದಿಸೋದು ತಾನೇ? ದುಡ್ಡು, ಕಾಸು ಬೇಕಾಗಿತ್ತಾ?

ಬ್ಯಾಡಪ್ಪಾ. ಅದೆಲ್ಲಾ ಏರ್ಪಾಟು ಮಾಡಿಕೊಂಡಿದಾಳೆ ಅಮ್ಮ

ಮತ್ತೆ? ವಸಗೆ ಮುಟ್ಟಿಸಿ ಹೋಗೋಕೆ ಬಂದ್ಯಾ? ನನ್ನಿಂದೇನಾರೂ ತೊಂದ್ರೆ ಆಗುತ್ತೆ ಅಂತ ಹೆದರಿಕೇನಾ?


ಥೋ, ಥೋ, ಹಂಗೇನಲ್ಲ..

ಹೇಳು ನಿಮ್ಮಮ್ಮಂಗೆ. ಆಗೋ ಶುಭಕಾರ್ಯಕ್ಕೆ ಕಡ್ಡಿ ಹೆಟ್ಟೋ ಕೆಲಸ

## ಬೆಳಕು

ಮಸಿ  
ಕೂತ ಲಾಟೀನು  
ಈ ಮನಸು  
ಬೆಳಕು ಮೂಡೀತು  
ಅದನೊಂದಿಷ್ಟು ಒರಸು

★ ಪ.ಚಂದ್ರಕುಮಾರ ಗೌನಹಳ್ಳಿ


ಈಶ್ವರ